ರಾಜಾಜಿನಗರದಲ್ಲಿರುವ ನಾಗರೀಕ ಸೌಲಭ್ಯದ ನಿವೇಶನಗಳು

೧೪೦೩. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಮುಂಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ರಾಜಾಜಿನಗರ ಕ್ಷೇತ್ರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಸಾರ್ವಜನಿಕ ಸೌಲಭ್ಯ (ಸಿ.ಎ) ಬಿ.ಡಿ.ಎ. ನಿವೇಶನಗಳ ಸಂಖ್ಯೆ ಎಷ್ಟು ?

(ಆ) ಸಿ.ಎ. ನಿವೇಶನಗಳನ್ನು ಯಾರು ಯಾರಿಗೆ ಯಾವ ಯಾವ ಉದ್ದೇಶಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಂದ ಗುತ್ತಿಗೆಗೆ ನೀಡಲಾಗಿದೆ.

(ಇ) ಗುತ್ತಿಗೆಗೆ ತೆಗೆದುಕೊಂಡವರು ಅದರ ಪ್ರಯೋಜನ ಪಡೆದಿದ್ದಾರೆಯೇ ; ಪ್ರಯೋಜನ ಪಡೆಯದೆ ಇದ್ದರೆ, ಅವರ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವಿರೇಂದ್ರ ಪಾಟೀಲ್ (ಮುಂಖ್ಯಮಂತ್ರಿಗಳು).—

(ಅ) ೬೩.

(ಆ) ೬೦ (ವಿವರಗಳನ್ನು ಅನುಬಂಧ-೧ರಲ್ಲಿ ನೀಡಲಾಗಿದೆ.)

(ಇ) ೬೦ ಸಾರ್ವಜನಿಕ ಸೌಲಭ್ಯ ನಿವೇಶನಗಳನ್ನು ಪಡೆದಿರುವವರ ಪೈಕಿ ೫ ಸಂಘ ಸಂಸ್ಥೆಗಳು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಆ ಉದ್ದೇಶಕ್ಕಾಗಿ ಈವರೆವಿಗೆ ಉಪಯೋಗಿಸಿಲ್ಲ. (ವಿವರಗಳನ್ನು ಅನುಬಂಧ-೨ರಲ್ಲಿ ನೀಡಲಾಗಿದೆ). ಇಂಥಹ ಸಂಸ್ಥೆಗಳಿಂದ ನಿವೇಶನಗಳನ್ನು ಹಿಂದಕ್ಕೆ ಪಡೆಯಲು ಸೂಕ್ತ ಕ್ರಮ ಕೈಗೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಕೇಳಲಾಗುವುದು.

ANNEXURE–I

Statement Showing The Detalis Of C. A. Sites In Rajajinagara Assembly Constituency.

Sl. No.	Name of the Layout	C. A. sites No. or Location	To whom allotted	Purpose	Actual Utilisation
1	2	3	4	5	6
1	West of chord Road II stage	C.A.	Padmasree Dr, M. C. Modi Trust	Hospital	Hospital
2	,,	C.A. 2	Aravinda Vidyasala	School	School
3	,,	C A. 3	with B.D.A.	ward office and park	ward office and park
4	,,	C.A. 4	Ambedkar Memorial society	School	School
5	,,	C.A. 5	Sadara Vidyarthi Sangha	Hostel	Hostel and Kalyana Mantapa
6	,,	G.A. 5A	Mysore State Shivaji Education Society	School	School
7	,,	C.A. 6	Universal Education Scty.	School	School
8	,,	C.A. 6A	Karanikara Sangha	Hostel	Hostel and Kalyana Mantap
9	,,	C.A. 7	Visveshwaraya Indl. Institute	Institute	Institute
10	,,	C.A, 7A	Commissioner of Police	Police station	Vacant
11	,,	C.A. 9	BWSSB	Office and Reservoir of BWSSB	Office and Reservoir of BWSSB

12	,,	C.A. 10	Handed over to BCC	Park and Play Ground	Park and Play Ground
13	,,	C.A. 11	Avani Sringeri shankar Mutt	Temple	Temple
14	West of Chord Road II stage. II phase	C.A. 6 and 7	Kengal Hanumanthaiah Trust Temple	Temple	Temple
15	West of Chord Road, IV stage	C.A. 1	with BDA	Park	Park
16	Industrial Town IV stage	C.A. 1 and 2	Home Guards	Fire Station	Vacant
17	Mahalakshmi Layout	C.A. 1 and 2	Veeranjaneyaswamy Temple Trust	Temple Park and Play Ground	Temple, Park and Play Ground
18	,,	C.A. 3	Handed over to BCC	Park and Play Ground	Park ond Play Ground
19	,,	C.A. 4	P and T	Post Office	Vacant
20	,,	C.A. 5	Mahalakshmi Owners Residents Association	Social Activities	Vacant
21	,,	C.A. 6	Manjunatha Institute of Commerce	Institute	Institute
22	,,	C.A. 7	BCC	Swimming pool	Swimming pool
23	Further extension of Mahalakshmi layout	C.A. 2	With BDA	Play ground	Play ground
24	Rajajinagar I to IV Blocks	1	ISKCON	Temple and Community Hall	Temple ond Community Hall

1	2	3	4	5	6
25	,,	2	BWSSB	Reservoir BWSSB	Reservoir BWSSB
26	,,	C.A. 1	BCC	Park	Park
27	,,	C.A. 2	BCC	Park	Park
28	,,	C.A. 3	Valmiki Sangha	...	Vacant
29	,,	C.A. 4	St. Therressa Hospital	Hospital	Hospital
30	,,	C.A. 5	Temple Trust	Temple	Temple
31	,,	C.A. 6	Pancha Janya Education Society	School	School
32	,,	C.A. 7	Vidya Vardaka Education Society	School	School
33	,,	C.A. 8 and 9	BCC	Play Ground	Play Ground
34	,,	C A. 10	BCC	Play and Play ground	Play and Play ground
35	,,	C.A. 11	KLE Society	College	College
36	,,	C.A. 12	Home Department	Police station	Police station
37	,,	C.A. 13	Basaveshwara Education society	School	School
38	,,	C.A. 14	With BCC	Shopping complex	Shopping complex
39	,,	C.A. 15	BCC	Play ground	Play ground
40	,,	C.A. 16	Education Dept.	School	School
41	,,	C.A. 17	P and T Dept.	Post Office	Post Office
42	,,	C.A. 18	ESI	Hospital	Hospital
43	,,	C.A 19	KEB	Power Station	Power Station
44	,,	C.A. 20	BCC	Play ground and Temple	Play ground and Temple
45	,,	C.A. 21	With BCC	Park and Temple	Park and Temple
46	,,	C.A. 22	With BCC	Park	Park

47	Rajajinagar V and VI Block	C.A. 1	Bharathi Vidya Mandir	School	School
48	,,	C.A. 2	Parents Association	School and Play ground	School ond Play ground
49	,,	C.A. 3 & 4	With BCC	Park and Play ground	Park and Play ground
50	,,	C.A. 5	With BCC	Community Hall	Community Hall
51	Rajajinagar IV 'M' Block	C.A. 1	Jagad'guru Renukacharya College Science and Science & Arts	College	College
52	,,	C.A. 2	Jagadguru Renukacharya Education soeiety	Hostel	Hostel
53	,,	C.A. 117	Keshava Rao	Ashrama	Aahrama
54	,,	C.A. 117/A	—do—	,,	,,
55	Rajajinagara III stag	C.A. 1	With BCC	Park	Park
56	,,	C.A. 2	Rajarajeshwari Kalyana Mantapa Trust	Hostel	Hostel
57	,,	C.A. 3	Sarkari Gudde	Temple	Temple
58	,,	C.A. 4	Renuka Education Society	School	School
59	,,	C.A. 5	Mudaliar Sangha	Kalyana Mantapa	Kalyana Mantapa
60	,,	C A. 6	Sri Sai Trust	Temple, School and Kalyana Mantapa	Temple, School and Kalyana Mantapa

"ANNEXURE-II"

The list of Organisation to whom C. A. Sites have been Allotted by the B.D.A. which have not made use of the sites for the purpose for which they are allotted. The sites are vacant.

Sl. No.	Name of the Organisation		Area
			Acre-Guntas
1	Valmiki Sangha (Rajajinagar I to IV Blocks)	...	00A-15 Gts
2	Home Guards, (Industrial Town IV stage)	...	02A-10 Gts
3	Police Commissioner (West of Chord Road IInd Stage)	...	00A-06 Gts
4	Post and Telegraphs (Mahalakshmi Layout)	...	00A-15 Gts
5	Mahalakshmi Owners Residents Association (Mahalakshmi Layout		

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಅಧ್ಯಕ್ಷರೇ, ರಾಜಾಜಿನಗರ ಕ್ಷೇತ್ರದಲ್ಲಿ, ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿಯವರು ವಾಟರ್ ಟ್ಯಾಂಕ್ ಕಟ್ಟುವುದಕ್ಕೆ ಸೈಟು ಇಲ್ಲ, ಪಾಠಶಾಲೆಗಳಲ್ಲಿ ಹುಡುಗರಿಗೆ ಆಟವಾಡುವುದಕ್ಕೆ ಜಾಗ ಇಲ್ಲ. ಯಾವ ಉದ್ದೇಶಕ್ಕಾಗಿ ಈ ಸೈಟುಗಳನ್ನು ಬಿ. ಡಿ. ಎ. ನವರು ಕೊಟ್ಟಿದ್ದಾರೆ, ಆ ಉದ್ದೇಶಗಳಿಗೆ, ಗುತ್ತಿಗೆದಾರರು ಉಪಯೋಗ ಮಾಡಿ, ಇಂಪ್ಲಿಮೆಂಟ್ ಮಾಡಿಲ್ಲ; ಈ ರೀತಿ ಉಪಯೋಗ ಮಾಡದೇ ಇರತಕ್ಕ ಸೈಟುಗಳನ್ನು ವಾಪಸ್ ಪಡೆದು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಟ್ಯಾಂಕ್‌ಗಳನ್ನು ಕಟ್ಟುವುದಕ್ಕೆ ಮತ್ತು ಶಾಲಾ ಮಕ್ಕಳು ಆಟವಾಡುವುದಕ್ಕೆ, ಮೈದಾನದ ವ್ಯವಸ್ಥೆಗಾಗಿ ಅವಕಾಶ ಮಾಡಿಕೊಡಬೇಕೆಂಬ ಉಪ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಮಾರು ೬೩ ಕೇಂದ್ರಗಳಲ್ಲಿ ಸಾರ್ವಜನಿಕ ಸೌಲಭ್ಯಕ್ಕಾಗಿ ಬಿ.ಡಿ.ಎ. ನವರು ನಿವೇಶನಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ೫೫ ಮಂದಿ ಪಾತ್ರ, ಈ ಸೈಟುಗಳ ಸದುದ್ದೇಶ ಮಾಡಿಕೊಂಡಿಲ್ಲವೆಂದು ನನಗೆ ದೂರುಗಳು ಬಂದಿವೆ. ಈ ರೀತಿ ಬಿ.ಡಿ.ಎ. ನವರು ಕೊಟ್ಟಿರತಕ್ಕ ಸವಲತ್ತುಗಳನ್ನು ಉಲ್ಲಂಘನೆ ಮಾಡಿರತಕ್ಕ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳವರಿಗೆ ಆ ಸೈಟುಗಳನ್ನು ವಾಪಸ್ ತೆಗೆದುಕೊಳ್ಳಲಾಗುವುದೆಂದು ಪ್ರಾಧಿಕಾರದವರು ಸೂಚನೆ ಕೊಟ್ಟಿದ್ದಾರೆ.

ಶ್ರೀ ಕೆ. ಲಕ್ಕಣ್ಣ.—ಕ್ರಮ ತೆಗೆದುಕೊಳ್ಳಬೇಕು. ಈ ಸಿ.ಎ. ಸೈಟುಗಳನ್ನು ಬಿ.ಡಬ್ಲ್ಯ್ಯು. ಎಸ್.ಎಸ್.ಬಿ.ಗೆ, ಆಟದ ಮೈದಾನಕ್ಕೆ ರಿಸರ್ವ್ ಆಗಿ ಇಡಬೇಕು. ರಾಜಾಜಿನಗರ ಕ್ಷೇತ್ರದಲ್ಲಿ ಆಟದ ಮೈದಾನಕ್ಕೆ ಸ್ಥಳ ಇಲ್ಲ, ಬಿ.ಡಬ್ಲ್ಯ್ಯು.ಎಸ್.ಎಸ್.ಬಿ.ಯವರು ಮೇಲಂತಸ್ತಿನ ಟ್ಯಾಂಕ್ ಕಟ್ಟಬೇಕಾದರೆ, ಕಾರ್ಪೊರೇಷನ್‌ನವರು ಪಾರ್ಕ್ ಮಾಡಬೇಕಾದರೆ ಸ್ಥಳ ಇಲ್ಲ. ಈ ದೃಷ್ಟಿಯಿಂದ ಯಾವ ಉದ್ದೇಶಕ್ಕಾಗಿ ಈ ಸಿ.ಎ. ಸೈಟ್‌ಗಳನ್ನು ತೆಗೆದುಕೊಂಡಿದ್ದಾರೆ, ಅವರು ಅದಕ್ಕಾಗಿ ಅದನ್ನು ಉಪಯೋಗಿಸಿಲ್ಲ; ಅದನ್ನು ವಾಪಸ್ ತೆಗೆದುಕೊಂಡು ಬಿ.ಡಬ್ಲ್ಯ್ಯು.ಎಸ್.ಎಸ್.ಬಿ.ಗೆ ಮತ್ತು ಬಿ.ಸಿ.ಸಿ.ಗೆ ಕಾದಿರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ನನ್ನ ಈ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನಮ್ಮ ಸೆಕ್ರೆಟೇರಿಯೇಟ್‌ಗೆ ಉತ್ತರಗಳು ಬಂದಿಲ್ಲವಂತಲ್ಲ. Have we received the replies? What is the procedure generally we observe here?

SRI M. VEERAPPA MOILY.—I have supplied the reply, to the Hon'ble Member.

ಶ್ರೀ ಎಂ. ಮಾಹದೇವ್.—ಅಧ್ಯಕ್ಷರೇ, ಈ ಉದ್ಯಮದ ಕಲುಷಿತ ನೀರಿನಿಂದ ಜನಗಳಿಗೆ ಆರೋಗ್ಯಕ್ಕೆ ಧಕ್ಕೆಯಾಗುತ್ತದೆ ಎಂಬುದು ಸರಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ನನಗೆ ಆ ಕ್ಷೇತ್ರದಲ್ಲಿ .....

MR. SPEAKER.—I don't even understand why the Government should come out with such flimsy replies. This question has been raised. The Hon Chief Minister has been very categorical when he said that he is going to ask for shutting down that particular distillery in Nanjangud.

SRI M. VEERAPPA MOILY.—The reply is that the bad odour emanating from the discharge of the polluted water, has come to the notice of the Government. However, the fact in that this bad odour is affecting the human health has not come to the notice of the Government. That is not the proper reply.

MR. SPEAKER.—I think you should pull up your officers. This s not the way to answer a question.

SRI M. VEERAPPA MOILY.—I totally agree with the Hon. Speaker that this is not the way to answer.

MR. SPEAKER.—It is certainly not. This is taking the House for granted.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ೨೨ನೇ ಜೂನ್‌ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸ್‌ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ. ಏನೆಂದರೆ ಹೈಕೋರ್ಟ್‌ನಲ್ಲಿ ಕೂಡ ಈ ವಾದ ಇರುವಾಗ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಆಪರೇಷನ್ ಯಾವುದೇ ರೀತಿಯಿಂದ, ಯಾವುದೇ ನೆವದಿಂದ ಏನು ಒಂದು recovery ಪ್ಲಾಂಟ್ ಪ್ರಾಕಲಿಕ್ಕೆ ಎಂಟು ತಿಂಗಳು ಸಮಯ ಏನಂ ಕೇಳುತ್ತಿದ್ದಾರೆ. ಆ ಸಮಯ ಕೊಡಬಾರದೆಂದು ನಾವು ಅಫಿಡವಿಟ್ ಫೈಲ್ ಮಾಡಿದ್ದೇವೆ. ಕೇಸ್ ೫ನೇ ತಾರೀಖಿಗೆ ಇದೆ. ಅಫಿಡವಿಟ್ ನಾವು ಇವತ್ತು ಫೈಲ್ ಮಾಡಿರುತ್ತೇವೆ. ೫ನೇ ತಾರೀಖು ಕೇಸ್ ಬರುತ್ತಿದೆ. ನಾವು ಹೈಕೋರ್ಟ್‌ನಲ್ಲಿ ತೀವ್ರವಾಗಿ ಪ್ರತಿಭಟನೆ ಮಾಡುತ್ತೇವೆ. ಇವರ ವಾದದ ಬಗ್ಗೆ ಯಾವುದೇ ಒಂದು ಕಾರಣದಿಂದ ಯಾವುದೇ ಒಂದು ನೆವದಿಂದ ಈ ವಾಯಿದೆಯನ್ನು ವಿಸ್ತರಿಸಬಾರದೆಂದು ಹೇಳಿದ್ದೇವೆ. ಮತ್ತು ನಮ್ಮ ಪಲ್ಯೂಷನ್ ಬೋರ್ಡ್‌ನವರು ಇದಕ್ಕೆ ಒಂದು ಪರ್ಮನೆಂಟ್ ಇಂಜೆಂಕ್ಷನ್ ಕೊಡಬೇಕು, ಯಾವುದೇ ರೀತಿಯಿಂದ ಈ ಕೈಗಾರಿಕೆ ನಡೆಸಬಾರದೆಂದು ಕೋರ್ಟನ್ನು ಅಪ್ರೋಚ್ ಮಾಡಿದ್ದೇವೆ. ಇಷ್ಟು ಮಾತ್ರವಲ್ಲ, ಸ್ವತಂತ್ರವಾಗಿ Assistant Commissioner of Nanjangud in his own capacity also has restrained the factory from the functioning in the manner in which they are functioning.

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಚಾರ. ನಾವು ಈ ಬಗ್ಗೆ ಈ ಸದನದಲ್ಲಿ ಸಾಕಾದಷ್ಟು ಪ್ರಸ್ತಾಪ ಮಾಡಿದ್ದೇವೆ. ಸರಕಾರದ ಪಲ್ಯೂಷನ್ ಬೋರ್ಡ್ ಏನಿದೆ. ಆ ಬೋರ್ಡ್‌ನವರು ಸರಿಯಾಗಿ ತಮ್ಮ ಕರ್ತವ್ಯವನ್ನು ಮಾಡಿಲ್ಲ ಎಂದು ನಾನು ಈ ಸದನದಲ್ಲಿ ಆಪಾದನೆ ಮಾಡಬೇಕಾಗಿದೆ. ಅಧ್ಯಕ್ಷರೇ, ತಾವು ದಯವಿಟ್ಟು ಕ್ಷಮಿಸಬೇಕು. ಇದರಿಂದ ಸಾಕಷ್ಟು ಜನರಿಗೆ ಕರುಳು ಬೇನೆ ಬಂದಿದೆ. ಜನಗಳ ಆರೋಗ್ಯಕ್ಕೆ ಬಹಳ ಧಕ್ಕೆಯಾಗಿದೆ. ಜೊತೆಗೆ ಎಷ್ಟೋ ದನಕರುಗಳು ಈ ನೀರನ್ನು ಕುಡಿದು ಸ್ಪಾಟ್‌ನಲ್ಲೇ ಸತ್ತಿವೆ. ಅಂತಹದರಲ್ಲಿ ಏನು ಆಗಿಲ್ಲ ಎಂದು ಸರಕಾರದಿಂದ ಉತ್ತರ ಬಂದಿದೆ. ನನಗೆ ಏನೂ ಅರ್ಥ ಆಗುತ್ತಿಲ್ಲ. ಸರಕಾರ ಕೊಳವೆ ಬಾವಿಗಳ ನೀರು ಮಲೀನವಾಗಿರುವುದಂ ನಿಜ ; ಆದರೆ ಆದನ್ನು ಕುಡಿದು ದನಕರುಗಳು ಸತ್ತಿರುವುದು ಮತ್ತು ಫಸಲು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ.ಆಲ್ಲಿ ಕೊಳವೆ ನೀರು ಮಲಿನವಾಗಿರುವುದು ನಿಜ ಎಂದು ಸರ್ಕಾರ ಒಪ್ಪಿಕೊಂಡ ಮೇಲೆ ದನಕರುಗಳು ಸತ್ತಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಇದು ಸರಿಯಲ್ಲ. ಆ ಜಾಗದಲ್ಲಿ ಕಲಷಿತ ನೀರು ವ್ಯವಸಾಯಕ್ಕೆ ಉಪಯೋಗ ಮಾಡುತ್ತಾರೆ. ಆ ಕಲಷಿತ ನೀರು ಎಲ್ಲಾ ಕಡೆಗೆಹೋಗಿ ಅಲ್ಲಿ ಪೈರು ಮತ್ತು ಹೂವು ಎಲ್ಲಾಸುಟ್ಟು ಹೋಗಿರುವುದು ಸಹ ಇದೆ. ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಪರಿಶೀಲನೆ ಮಾಡದೆ ಸರ್ಕಾರ ಇಂತಹ ಒಂದು ರಿಪೋರ್ಟ್ ಕೊಟ್ಟರೆ ನಾವು ಏನು ಹೇಳಬೇಕಾಗುತ್ತದೆ ? ಮತ್ತೆ ಇನ್ನೊಂದು ಆಲ್ಲಿ ಪ್ರಮುಖವಾದ ವಿಚಾರ ಎಂದರೆ ನಂಜನಗೂಡಿನಲ್ಲಿ ಒಂದು ಪವಿತ್ರವಾದ ದೇವಸ್ಥಾನ ಇದೆ. ಆ ದೇವಸ್ಥಾನದ ಗೋಪುರಕ್ಕೆ ಈ ಕಲಷಿತ ಗಾಳಿ ಬೀಸುವುದರಿಂದ ದೇವಸ್ಥಾನದ ಗೋಪುರಕ್ಕೆ ಹಾನಿಯಾಗುವ ಸಂಭವ ಜಾಸ್ತಿ ಇದೆ. ಇದರ ಬಗ್ಗೆ ಸರ್ಕಾರ ಒಂದು ನಿಲುವು ತೆಗೆದುಕೊಳ್ಳಬೇಕು ಸ್ಪಷ್ಟವಾಗಿ ಹೇಳಬೇಕು. ಆಲ್ಲಿ ಯಾವುದೇ ದನಕರುಗಳು ಸತ್ತಿಲ್ಲ ಜನರ ಆರೋಗ್ಯಕ್ಕೆ ಧಕ್ಕೆ ಇಲ್ಲ ಎಂದು ಹೇಳುವುದು ಸರಿಯಲ್ಲ. ಮತ್ತು ಆಲ್ಲಿ ದನಕರುಗಳಿಗೆ ತೊಂದರೆಯಾಗಿಲ್ಲವೆಂದು ಸರ್ಕಾರ ಹೇಳುತ್ತಿರುವುದು ಸರಿಯಲ್ಲ ಈ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ನಿಲುವು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಆವರಲ್ಲಿ ಕೇಳಿಕೊಳ್ಳುತ್ತೇನೆ.

SRI M. VEERAPPA MOILY.—Sir, the reply given stating 'it does not affect the people'–that part of the reply, I am submitting that stands withdrawn..... ಆದರ ಮೇಲೆ ಅಂಕಿಅಂಶಗಳನ್ನು ಹುಡುಕಲು ಅಧಿಕಾರಿಗಳು ಹೋಗಿದ್ದಾರೆ. ಅಧಿಕಾರಿಗಳಿಗೆ ದನಕರುಗಳು ಸತ್ತ ಬಗ್ಗೆ ಮಾಹಿತಿ ಇಲ್ಲ. ಕಲುಷಿತ ನೀರು ಅಲ್ಲಿರುವುದರಿಂದ That will affect human beings–that goes without saying, ಆದ್ದರಿಂದ to that extent we correct our reply.

MR. SPEAKER.—It is a question of little common-sense Nothing beyond that.....

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಇನ್ನೊಂದು ವಿಚಾರವೆಂದರೆ ಅಫಿಡವಿಟ್ ಅನ್ನು ಹೈಕೋರ್ಟ್‌ನಲ್ಲಿ ಫೈಲ್ ಮಾಡಿದ್ದೇವೆ. ಏನು ಮಿಸ್ಟೇಕ್ ಆಗಿದೆ ಅದನ್ನು ರೆಕ್ಟಿಫೈ ಮಾಡಬೇಕೆಂದು ಈ ಬಂದು ದೋಷವನ್ನು ಅವರು ಪರಿಹಾರ ಮಾಡದಿದ್ದರೆ ಕೈಗಾರಿಕೆ ನಡೆಸುವುದಕ್ಕೆ ಅನುಮತಿ ಕೊಡಬಾರದು. ಸರ್ಕಾರ ಕೊಡುವುದಿಲ್ಲ ಮತ್ತು ವಿಸ್ತರಣೆ ಕೂಡ ಮಾಡುವುದಕ್ಕೆ ನಾವು ಅನುಮತಿ ಕೊಡುವುದಿಲ್ಲ ಎಂದು ಹೈಕೋರ್ಟಿಗೆ ತಿಳಿಸಿದ್ದೇವೆ. ಆಲ್ಲಿ ಇರುವ ದೋಷ ಪರಿಹಾರ ಮಾಡದಿದ್ದರೆ ಆ ಕೈಗಾರಿಕೆಯನ್ನು ಮುಂದುವರಿಸಕ್ಕೆ ಪ್ರಶ್ನೆ ಉದ್ಭವವಾಗುವುದಿಲ್ಲ ಎನ್ನುವ ಸ್ಪಷ್ಟವಾದ ನಿಲುವನ್ನು ದಿನಾಂಕ ೨೨-೬-೧೯೯೦ ರಂದು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಿರುವುದನ್ನು ನಾನು ಸಹ ಮತ್ತೆ ಇಲ್ಲಿ ಪುನರುಚ್ಚರಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಮತ್ತು ಇದನ್ನೇ ಹೈಕೋರ್ಟಿನಲ್ಲಿ ಸಹ ಹೇಳಿದ್ದೇವೆ. ೫ನೇ ತಾರೀಖಿಗೆ ಹೈಕೋರ್ಟಿನಲ್ಲಿ ಕೇಸ್ ಲಿಸ್ಟ್ ಬಾಗ್ತತೆ ಬರುವುದಕ್ಕೆ ನಾವು ಒತ್ತಾಯ ಮಾಡುತ್ತಿದ್ದೇವೆ. ಈಗ ಅದನ್ನು ಯಾವುದೇ ಕಾರಣದಿಂದ ರೆಕ್ಟಿಫೈ ಮಾಡದಿದ್ದರೆ ಅವರಿಗೆ ನಡೆಸುವುದಕ್ಕೆ ಕೊಡಬಾರದಂ ಎನ್ನುವ ಖಾಯಂ ಇಂಜಕ್ಷನ್‌ಗೆ ಕೂಡ ನಾವು ಕೋರ್ಟಿಗೆ ಮೂವ್ ಮಾಡಿದ್ದೇವೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ಬಂದಿರುವ ಈ ವರದಿ ಸರಿ ಇಲ್ಲ. ಆದಕ್ಕಾಗಿ ಇದನ್ನು ಪರಿಶೀಲನೆ ಮಾಡಲು ಇಲ್ಲಿಂದ ಏನಾದರೂ ಒಂದು ನಿಯೋಗ ಕಳುಹಿಸಿಕೊಡುತ್ತೀರಾ ?

ಅಧ್ಯಕ್ಷರು.—ಈಗಾಗಲೇ ಸರ್ಕಾರ ಒಪ್ಪಿದೆ. ಸರ್ಕಾರಕ್ಕೆ ಏನು ಮಾಹಿತಿ ಬಂದಿದೆ ಅದು ಸರಿಯಲ್ಲ ಎಂದು. ಅಲ್ಲಿ ಜನರಿಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಕೂಡ ಬಂದಿದೆ ಎಂದು ಹೇಳಿದ್ದಾರೆ. ಆದ್ದರಿಂದ ನಾವು ಏನು ಮಾಡಬೇಕು ? ಮತ್ತೆ ನಿರ್ದಿಷ್ಟವಾಗಿ ಹೈಕೋರ್ಟಿನ ಮುಂದೆ ಕೈಗಾರಿಕೆ ನಡೆಸುವುದಕ್ಕೆ ಅವಕಾಶ ಕೊಡಬಾರದಂ ಎನ್ನುವ ನಿಲುವು ತೆಗೆದುಕೊಂಡಿದ್ದೇವೆಂದಂ ಹೇಳಿದ್ದಾರೆ.

ಶ್ರೀ ಎಂ. ಮಹದೇವ್.—ಕೋರ್ಟ್‌ನಲ್ಲಿ ಲಾಗ್ ಪ್ರೋಸಸ್ ಆಗುತ್ತದೆ. ತಕ್ಷಣ ಸರ್ಕಾರ ಏನಾದರೂ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು —ಹಾಗಿದ್ದರೆ ಏನು ಮಾಡಬೇಕು ಹೇಳಿ.

ಶ್ರೀ ಎಂ. ಮಹದೇವ್.—ಇದು ತೀರ್ಮಾನ ಆಗುವವರೆಗೂ ಕಲುಷಿತ ನೀರನ್ನು ಹೊರಗಡೆ ಬಿಡದಂತೆ ಆದೇಶ ಕೊಡಬೇಕು. ಅವರು ಆ ರೀತಿ ಮಾಡದಿದ್ದರೆ ಆ ಫ್ಯಾಕ್ಟರಿಯನ್ನು ಮುಚ್ಚಿಸಬೇಕು ಸರ್ಕಾರ ಇದರ ಬಗ್ಗೆ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕು. ಈಗ ಅಲ್ಲಿ ಮತ್ತೆ ಜನ ಮತ್ತು ದನಗಳು ಸತ್ತರೆ ಯಾರು ಜವಾಬ್ದಾರರಾಗುತ್ತಾರೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಅಲ್ಲಿ ಕಲುಷಿತ ನೀರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆ ಕೈಗಾರಿಕೆಯಿಂದ ಕಲುಷಿತ ನೀರು ಬರುತ್ತದೆ ಎನ್ನುವ ಮಾಹಿತಿ ಸರ್ಕಾರಕ್ಕೆ ಬಂದಿದೆ ಆದ್ದರಿಂದ ಮತ್ತೆ ಅಲ್ಲಿಗೆ ನಿಯೋಗ ಏತಕೆ ಕಳಿಸಬೇಕು ? ಇದರ ಬಗ್ಗೆ ಮಾನ್ಯ ಸದಸ್ಯರು ಅನುಮಾನ ಮಾಡಬೇಡವು ಬೇಡ. ಸರ್ಕಾರ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತದೆ. ನಾವೂ ಕೂಡ ಉಚ್ಚನ್ಯಾಯಾಲಯಕ್ಕೆ ಹೋಗಿದ್ದೇವೆ ಪರ್ಮನೆಂಟ್ ಇನ್‌ಜಂಕ್ಷನ್ ಕೊಡಬೇಕೆಂದು ಕೇಳಿದ್ದೇವೆ. ಪೊಲ್ಯೂಷನ್ ಬೋರ್ಡ್‌ನವರೂ ಸಹ ಪರ್ಮನೆಂಟ್ ಇನ್‌ಜಂಕ್ಷನ್ ಕೊಡಬೇಕೆಂದು ಕೋರ್ಟಿನ ಮೊರೆ ಹೋಗಿದ್ದಾರೆ. ಇದರ ಜೊತೆಗೆ ಅಲ್ಲಿನ ಅಸಿಸ್ಟೆಂಟ್ ಕಮಿಷನರ್‌ರವರೂ ಸಹಾ ಸ್ವತಂತ್ರವಾದಂಥ ಕಾರ್ಯಾಚರಣೆ ಮಾಡಿದ್ದಾರೆ. ಆದುದರಿಂದ, ಇದರಿಂದ ಸರ್ಕಾರದ ಸಂಪೂರ್ಣ ನಿಲುವು ಮತ್ತು ಸ್ಪಷ್ಟೀಕರಣ ಕೊಟ್ಟಿದೆ. ಈ ತೊಂದರೆಯನ್ನು ಪರಿಹಾರ ಮಾಡದಿದ್ದರೆ ಆ ಕೈಗಾರಿಕೆಯನ್ನು ಯಾವುದೇ ರೀತಿಯಲ್ಲೂ ನಡೆಸುವುದಕ್ಕಾಗುವುದಿಲ್ಲವೆಂದು ಸರ್ಕಾರ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಒಂದೇ ಒಂದು ಉಪ ಪ್ರಶ್ನೆ

ಅಧ್ಯಕ್ಷರು.—ಶ್ರೀ ಪಂಜಾನಾಥ್ ಕೊನ್ನೂರ್

ಶ್ರೀವಾಟಾಳ್ ನಾಗರಾಜ್.—ಇದು ನಮ್ಮ ಕ್ಷೇತ್ರದ ಕಡೆಗೆ ಸಂಬಂಧಪಟ್ಟ ವಿಚಾರ

SRI D.B. CHANDRE GOWDA.—Mr. Speaker, Sir, you have permitted and posted him here. Should you not recognise him ?

MR. SPEAKER.—I had very weighty reasons to bring the Hon'ble Member to the front benche

ಶ್ರೀ ವಾಟಾಳ್ ನಾಗರಾಜ್.—ನನ್ನದು ಒಂದೇ ಒಂದು ಪ್ರಶ್ನೆ. ಸ್ವಾಮಿ ಈ ಫ್ಯಾಕ್ಟರಿಯಂ ಪರಿಸರನಾಶದಿಂದ ಸುಮಾರು ೧೦ ಕೋಟಿ ರೂಪಾಯಿಗಳವರೆಗೆ ನಷ್ಟವನ್ನು ಅನುಭವಿಸಿರತಕ್ಕ ಜನರು ೨೦ ಕಿಲೋಮೀಟರ್ ಒಳಗೆ ಇದ್ದಾರೆ. ಈ ನಷ್ಟ ಹೊಂದಿದ ಜನರುಗಳಿಗೆ ಪರಿಹಾರ ಕೊಡುವುದರ ಬಗ್ಗೆ ರಾಜ್ಯ ಸರ್ಕಾರದವರಂ ಆ ಫ್ಯಾಕ್ಟರಿಯ ವಿರುದ್ಧ ದಾವೆಯನ್ನು ಹೂಡಿ ಪರಿಹಾರವನ್ನು ಕೊಡಿಸುವುದಕ್ಕೆ ಒತ್ತಾಯ ಮಾಡಲಾಗುತ್ತದೆಯೇ ? ಇದರ ಬಗ್ಗೆ ಹಿಂದೆ ಇದ್ದ ಮುಖ್ಯ ಮಂತ್ರಿಗಳು ಒಂದು ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದರು. ಇದರ ಹಿಂದೆ ಪ್ರಭಾವಿತವಾದಂಥ ವ್ಯಕ್ತಿಗಳು ಇದ್ದಾರೆ. ಕಲುಷಿತ ನೀರು ಬರದ ಹಾಗೆ ನಾವು ನೋಡಿಕೊಳ್ಳುತ್ತೇವೆ, ಫ್ಯಾಕ್ಟರಿ ನಡೆಸುವುದಕ್ಕೆ ಮತ್ತೆ ಅನುಮತಿ ಕೊಡಿ ಎಂದು ಅವರು ಕೇಳಿದರೆ ಅದಕ್ಕೆ ಅನುಮತಿ ಕೊಡಬಾರದು. ಮಾನ್ಯ ಅಧ್ಯಕ್ಷರೇ, ಕಪಿಲಾ ನದಿಯಿಂದ ಈ ಫ್ಯಾಕ್ಟರಿಯವರೆಗೆ ಒಂದು ದೊಡ್ಡ ಪೈಪನ್ನೆ ಹಾಕಿದ್ದಾರೆ. ಅದರಿಂದ ಟಟ್ಟು ನೀರು ನದಿಗೆ ಸೇರಿ ನದಿ ನೀರು ಕೆಡುವುದಲ್ಲದೆ ಸುತ್ತಮುತ್ತಲಿನ ಪರಿಸರ ಕೂಡ ಕೆಡುತ್ತಿದೆ. ಅಲ್ಲಿನ ದೇವಸ್ಥಾನಕ್ಕೂ ತೊಂದರೆಯಾಗುತ್ತಿದೆ. ೧೦ ಕೋಟಿ ರೂಪಾಯಿಗಳಷ್ಟು ನಷ್ಟ ಹೊಂದಿರುವ ಜನಗಳಿಗೆ ಪರಿಹಾರ ಕೊಡುವುದರ ಬಗ್ಗೆ ಫ್ಯಾಕ್ಟರಿ ವಿರುದ್ಧ ಸರ್ಕಾರದವರು ಹೈಕೋರ್ಟಿನಲ್ಲಿ ಮೊಕದ್ದಮೆ ಹಾಕುತ್ತೀರಾ ? ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಪರಿಹಾರದ ಬಗ್ಗೆ ಕಾಯಿದೆಯಲ್ಲಿ ಏನು ಸೂಚಿಸಿದ್ದಾರೆಂದು ನೋಡಬೇಕು. ಪಲ್ಯೂಷನ್ ಆಕ್ಟ್ ಇದೆ. ಅದನ್ನೂ ನೋಡಬೇಕು. ಹೊಸ ಸೂಚನೆ ತಾವು ಕೊಟ್ಟಿದ್ದೀರಿ, ಅದನ್ನು ನಾವು ಪರಿಶೀಲಿಸುತ್ತೇವೆ. ಆಮೇಲೆ ಅಲ್ಲಿ ಪ್ರಭಾವಿತರಿದ್ದಾರೆಂದು ತಾವು ಹೇಳಿದ್ದೀರಿ. ಆ ಪ್ರಭಾವಿತರ ಕೈ ನಮ್ಮ ಸರ್ಕಾರದ ಕದವನ್ನು ತಟ್ಟುವುದಕ್ಕಾಗುವುದಿಲ್ಲ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಸರ್ಕಾರದ ಕದವನ್ನು ಈಗಾಗಲೇ ೧೨ ಸಾರಿ ತಟ್ಟಿದ್ದಾರೆ.

ರಾಜ್ಯದಲ್ಲಿ ಹೆಚ್ಚು ಸ್ವಯಂ ಉದ್ಯೋಗಗಳನ್ನು ಮಾಡಲು ಸರ್ಕಾರದಿಂದ ಪ್ರೋತ್ಸಾಹ ಮತ್ತು ಕಾರ್ಯಕ್ರಮ

೧೧೪೮. ಶ್ರೀ ಮಂಜುನಾಥ ಕುನ್ನೂರ್ (ಶಿಗ್ಗಾಂವ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಈ ರಾಜ್ಯದಲ್ಲಿ ಉದ್ಯೋಗ ವಿನಿಮಯ ಕಛೇರಿಯಲ್ಲಿ ಎಸ್.ಎಸ್.ಎಲ್.ಸಿ. ಪಿಯುಸಿ ಪದವೀಧರರು ಹಾಗೂ ತಾಂತ್ರಿಕ ತರಬೇತಿ ಹೊಂದಿದ ನಿರುದ್ಯೋಗಿ ಯುವಕ ಯುವತಿಯರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಉದ್ಯೋಗ ವಿನಿಮಯ ಕಛೇರಿಗಳ ದಾಖಲೆ ಪ್ರಕಾರ ವಿವರ ನೀಡುವುದು).

ಆ) ಕಳೆದ ಮೂರು ವರ್ಷಗಳಿಂದ ಎಷ್ಟು ಜನ ನಿರುದ್ಯೋಗಿಗಳಿಗೆ ನಮ್ಮ ಸರ್ಕಾರದಿಂದ ಉದ್ಯೋಗ ಒದಗಿಸಿಕೊಡಲಾಗಿದೆ ?

ಇ) ಸ್ವತಂತ್ರ ಉದ್ಯೋಗ ಕೈಗೊಳ್ಳಲು ಯಾರಿಗಾದರೂ ಸಲಹೆ—ಸಹಕಾರಗಳನ್ನು ಸರ್ಕಾರದವರು ಕೈಗೆತ್ತಿಕೊಂಡಿರುವರೇ ?